elections also. Now the amendment proposed is that by virtue of his office as a member of the Assembly, he is to be considered as a full member of the taluk board and therefore he will have the right to contest for the Presidentship even without contesting for the primary elections. In view of this assurance, I would request the hon'ble Member to withdraw the proposed amendment.

Sri U. M. MADAPPA.—In view of the Minister's statement, I would like to withdraw the amendment.

The amendment was, by leave, withdrawn.

Mr. SPEAKER—Sri Sharan Gowda will move a resolution now.

Sri U. M. MADAPPA.—There is very little time left now. We may adjourn now.

Mr. SPEAKER.—If the intention of the hon'ble Members is that the motion should be taken up tomorrow, I have no objection. ನಾಳೆ ನಾನ್ ಅಫಿಷಿಯಲ್ ಬಿಸಿನೆಸ್ ಇದೆ, ಬೇಕಾದರೆ ಅರ್ಧ ಗಂಟೆ ಯೊಳಗೆ ಇದು ಮುಗಿದು ಹೋಗುತ್ತದೆ.

ಶ್ರೀ ಯು. ಎಂ. ಮಾದಪ್ಪ.—ಇನ್ನು ಅರ್ಧಗಂಟೆ ಕುಳಿತುಕೊಳ್ಳುವುದಾದರೆ ಇವೊತ್ತೇ ಈ ವಿಷಯವನ್ನ ಚರ್ಚೆ ಮಾಡಬಹುದು.

Mr. SPEAKER—The Chief Minister is not here.

INTRODUCTION OF BILLS

Sri T. SUBRAMANYA—I beg to introduce:

The Mysore High Court Bill, 1959.

Mr. SPEAKER.—The Bill is introduced.

Sri T. SUBRAMANYA.—I beg to introduce:

The Mysore Municipalities Bill, 1959.

Mr. SPEAKER.—The Bill is introduced.

Sri H. M. CHANNABASAPPA.—I beg to introduce:

The Mysore Irrigation Bill, 1959.

Mr. SPEAKER.—The Bill is introduced.

Sri N. RACHIAH.—I beg to introduce:

The Mysore Prohibition Bill, 1959.

Mr. SPEAKER.—The Bill is introduced.

Mr. SPEAKER.—Before we rise for the day, I want to announce to the House the position of questions. Questions tabled : 552. Questions admitted : 447. Replies received from Government 282.

Members' Representations

Sri Y. VEERAPPA.—Sir, we are dissatisfied with the attitude of the Government on this matter of questions. We note that Government have not been promptly answering certain questions, to which answers are readily available even in the headquarters. Further, this method of adjourning the House *sine die* and then proroguing it, creates a lot of confusion.

6 P.M.

Therefore, I submit to the House through the Speaker that the House should be prorogued at the end of the session itself in order to enable members to send their questions and get replies in time.

Sri B. K. PUTTARAMIYA.—Will there be any chance of at least one question of mine being answered in this session? What is the sin that I have committed as the Government have not answered my questions?

ಶ್ರೀ ಟಿ. ಹನುಮಯ್ಯ.—ಪಟೇಲ ಶ್ಯಾನುಭೋಗರ ಹಕ್ಕನ್ನು ರದ್ದು ಮಾಡುವ ಬಿಲ್ಲು ಬರುತ್ತಿದೆ ಎಂದು ಹೇಳಿದ್ದರು. ಇನ್ನೂ ಬರಲೇ ಇಲ್ಲವಲ್ಲಾ, ಸ್ವಾಮಿ.

ಅಧ್ಯಕ್ಷರು.—ಎಂದರೆ, ಪ್ರಶ್ನೆಗಳ ಬಗ್ಗೆ ಸ್ವಲ್ಪ ತೊಂದರೆಯಾಗುತ್ತಿದೆ. ನಾವು ಕಳುಹಿಸಿಕೊಟ್ಟ ಪ್ರಶ್ನೆಗಳಿಗೆ—ಎಷ್ಟೋ ದಿನಗಳ ಮೊದಲೇ ಕಳುಹಿಸಿದ್ದರೂ ಸರ್ಕಾರದ ಕಡೆಯಿಂದ ಉತ್ತರ ಸರಿಯಾಗಿ ಬರುತ್ತಿಲ್ಲ. ಇದರಿಂದ ತೊಂದರೆಯಾಗಿದೆ. ನನಗೂ ಶ್ರೀಮಾನ್ ವೀರಪ್ಪನವರು ಹೇಳಿದ ಹಾಗೆ sine-die ಮಾಡಿ ಅಡಜರ್ನ್ ಮಾಡುವುದಕ್ಕೆ ಬದಲಾಗಿ Prorogue ಮಾಡುವುದೇ ಸರಿಯಾಗಿ ಕಾಣುತ್ತದೆ. If it is possible tomorrow, Government may please get the prorogation order.

(ಅಧ್ಯಕ್ಷರು)

Many members have complained to me that according to the present practice on an average 50% of the questions have not come up for answer.

Sri H. M. CHANNABASAPPA.—Are they all 15 days old ?

Mr. SPEAKER.—A number of them are 15 days old. I do not blame the Government bacause the questions are received only as and when they are tabled by the members. There fore my office will have to go into them. That will take some time. Then they will have to be sente to Government and Government will also take some time and by the time the replies are received the House is adjourned. That is why I suggest that if tomorrow we prorogue the House, the members get the right to send questions from tomorrow and thus it will be possible to avoid all the trouble.

†ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದು ವಿಷಯವನ್ನು ತಮ್ಮ ಮುಂದೆ ಅರಿಕೆ ಮಾಡಬೇಕಾಗಿದೆ. ಈ ಪ್ರಶ್ನೆಗಳು ಪೂರ್ವದಲ್ಲಿ ಎರಡು ದಿವಸಗಳಿಗೆ ಮುಂಚಿತವಾಗಿ ಅಚ್ಚಾಗಿ ಪ್ರಶ್ನೋತ್ತರಗಳು ಸಹಿತ ಎಲ್ಲ ಸದಸ್ಯರುಗಳ ಕೈಗೆ ಸಿಕ್ಕುತ್ತಿದ್ದುವು. ಆಗ ಅವರು ಅವನ್ನು ಓದಿ ನೋಡಿಕೊಂಡು ಏನು ಪ್ರಶ್ನೆಗಳನ್ನು ಹಾಕಬೇಕು ಎನ್ನುವುದನ್ನು ಯೋಚನೆಮಾಡಿಕೊಂಡು ಬರುತ್ತಿದ್ದರು. ಈಗಿನ ಪರಿಸ್ಥಿತಿ ಏನಾಗಿದೆ ಎಂದರೆ ನಾಳೆ ಯಾವ ಪ್ರಶ್ನೆ ಬರುತ್ತದೆ ಎನ್ನುವುದೇ ಗೊತ್ತಿರುವುದಿಲ್ಲ. ನನಗೇ ಯಾವ ಪ್ರಶ್ನೆ ಬರುತ್ತದೆ ಎನ್ನುವುದನ್ನು ತಿಳಿಯಬೇಕಾದರೆ ರಾತ್ರಿ ಏಳು ಗಂಟೆಗೋ, ಎಂಟು ಗಂಟೆಗೋ ನನ್ನ ಕೈಗೆ ಪ್ರಶ್ನೆಗಳು ಸಿಕ್ಕುತ್ತವೆ. ಅದನ್ನು ನಾವು ರಾತ್ರಿಯೆಲ್ಲಾ ನೋಡಿ ನಮ್ಮ ಉತ್ತರಗಳನ್ನು ಸಿದ್ಧಪಡಿಸಿಕೊಳ್ಳಬೇಕು. ತಾವು ಹೊಸದಾಗಿ ಈ ಅಸೆಂಬ್ಲಿಯಲ್ಲಿ ಮಾಡಿರುವ ನಿಯಮಗಳ ಕಾರಣದಿಂದ ಈ ಪ್ರಶ್ನೆಯನ್ನು ಹಾಕುವ ಪದ್ಧತಿಗಳಲ್ಲಿ ಸ್ವಲ್ಪ ಬಿಕ್ಕಟ್ಟುಂಟಾಗಿದೆ. ಪೂರ್ವದಲ್ಲಿ ಇದ್ದಂತಹ ಪದ್ಧತಿಯನ್ನು ಪುನಃ ಸಂದರ್ಭದಲ್ಲಿಯೂ ತಂದರೆ ಎಲ್ಲ ಪ್ರಶ್ನೋತ್ತರಗಳೂ ಹಿಂದಿನಂತೆ ಎರಡು ದಿನಗಳ ಮುಂಚಿತವಾಗಿ ಸದಸ್ಯರುಗಳ ಕೈಗೆ ಸಿಕ್ಕುವಂತೆ ಮಾಡಿದರೆ ಪ್ರಶ್ನೆ ಹಾಕುವವರು ಪರಿಶೀಲನೆಮಾಡಿ ಯಾವ ಯಾವ ಪ್ರಶ್ನೆಗಳನ್ನು ಹಾಕಬೇಕೆಂದು ಸಿದ್ಧವಾಗಿ ಬರುತ್ತಾರೆ. ಉದಾಹರಣೆಗಾಗಿ ಹೇಳುವುದಾದರೆ, ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ದುಗ್ಗಪ್ಪನವರಿಗೆ ಇಂದು ಯಾವ ಪ್ರಶ್ನೆ ಬರುತ್ತದೆ ಎಂದು ತಿಳಿದಿರಲಿಲ್ಲ. ಅವರನ್ನು ನಾನೇ ಕರೆದು ಅವರ ಪ್ರಶ್ನೆ ಇವೊತ್ತು ಬರುತ್ತದೆ ಎಂದು ಹೇಳಬೇಕಾಯಿತು. ಈ ಕಾರಣಗಳಿಂದ ನನ್ನ ಸಲಹೆ ಪೂರ್ವದ ಪದ್ಧತಿಯನ್ನೇ ಅನುಸರಿಸಬೇಕು ಎನ್ನುವುದು ಮೊದಲನೆಯದು.

ಎರಡನೆಯದು, ಈಗ 15 ದಿವಸಗಳ ಅವಧಿ ಎಂದು ನಿಗದಿ ಮಾಡಿದ್ದೀರಿ. ಇದರಿಂದ ನಮಗೆ ಉತ್ತರ ಕೊಡಲಿಕ್ಕೆ ಯಾವ ಅಭ್ಯಂತರವೂ ಇಲ್ಲ. ಕೆಲವು ಪ್ರಶ್ನೆಗಳನ್ನು ನಾವು ಟೆಲಿಗ್ರಾಮು, ಟೆಲಿಫೋನುಗಳ ಮೂಲಕ ತರಿಸಿಕೊಳ್ಳಬೇಕಾಗುತ್ತದೆ. ಈ ರೀತಿ ತರಿಸಿಕೊಳ್ಳುವಾಗ ಫೋನಿನಲ್ಲೂ ತಪ್ಪಾಗಿ ಕೇಳಿ ಬಹುದು. ಅದರಿಂದ ಉತ್ತರವನ್ನೂ ತಪ್ಪಾಗಿಕೊಡುವ ಪ್ರಸಂಗವೂ ಬರುತ್ತದೆ. ಒಂದೊಂದು ವೇಳೆ ಅಧಿಕಾರಿಗಳು ಪ್ರವಾಸದ ಮೇರೆ ಹೋಗಿರುತ್ತಾರೆ. ಅದರಿಂದ ನಿರ್ದಿಷ್ಟವಾಗಿ ಸರಿಯಾದ ವಿವರಗಳನ್ನು ಕೊಡುವುದು ಕಷ್ಟವಾಗುತ್ತದೆ. ಸರಕಾರ ಉತ್ತರಗಳನ್ನು ಕೊಡುವಾಗ ಜವಾಬ್ದಾರಿಯುತವಾಗಿ, ತೂಕಮಾಡಿ ಅಂಕಿ ಅಂಶಗಳನ್ನು ನೋಡಿಕೊಡಬೇಕಾದುದು ಅವಶ್ಯವಾಗಿದೆ. ಈ ಕಾರಣ ಪ್ರಶ್ನೆಗಳನ್ನು ಎಷ್ಟು ಬೇಕಾದರೂ ಕೊಡಲಿ, ನಮಗೂ ಕೂಡ ಸ್ವಲ್ಪ breathing space ಕೊಡಿ. ಒಂದೊಂದು ವೇಳೆ ಡಿಟೇರ್ಸ್‌ನ್ನು ತರಿಸಬೇಕಾದರೆ ಟೆಲಿಫೋನ್ ಮೆಸೇಜುಗಳು ಮತ್ತು ಟ್ರಂಕ್‌ಕಾಲ್‌ಗಳು, ಇವನ್ನು ಮಾಡಿದರೂ ಸರಿಯಾದ ಉತ್ತರಗಳು ಬಾರದೆ ಈ ಸಭೆಗೆ ಉತ್ತರಗಳನ್ನು ಕಳುಹಿಸಲು ಅವಕಾಶವಿಲ್ಲದಂತಾಗುತ್ತದೆ. ಆದುದರಿಂದ ಈಗಿರುವ ನಿಯಮವನ್ನು ಅಮೆಂಡ್ ಮಾಡಲು ಅವಕಾಶವಿದ್ದರೆ ಮಾಡಿ ಸ್ವಲ್ಪ ಹೆಚ್ಚಿನ ಅವಕಾಶ ಕೊಡುವಂತೆ ಮಾಡಬೇಕು. ಸ್ವಲ್ಪ ಕಾಲಾವಕಾಶವನ್ನು ಕೊಟ್ಟರೆ ಅನುಕೂಲವಾಗುತ್ತದೆ. ಇಷ್ಟು ಉಪಕಾರ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

†ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚನ್ನಪಟ್ಟಣ).—ಸ್ವಾಮೀ, ಇಷ್ಟು ದಿವಸಕ್ಕೆ ಇಷ್ಟು ನ್ಯಾಯವಾಗಿ ಮಾತನಾಡಿದಂತಹ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಚನ್ನಬಸಪ್ಪನವರನ್ನು ನಾನು ಇವೊತ್ತೇ ನೋಡಿದುದು. ಅವರು ಈಗ ಏನೇನು ಹೇಳಿದರೋ ಅವೆಲ್ಲವೂ ನಿಜವಾದ ಪರಿಸ್ಥಿತಿಗಳೇ. ಅದರಂತೆ ತೊಂದರೆಗಳನ್ನು ಕಡಮೆ ಮಾಡುವುದರ ಜೊತೆಗೆ duplicate printing of questions and answers ಕಡಮೆ ಮಾಡಿ. paper wastage, printing wastage ಕಡಮೆಯಾಗುತ್ತದೆ. Time waste ಆಗುತ್ತದೆ. ಈಗ ಮಾನ್ಯ ಮಂತ್ರಿಗಳು ಹೇಳಿದಂತೆ ಈ ಪ್ರಶ್ನೆಗಳ ಮತ್ತು ಉತ್ತರಗಳ ಅಚ್ಚಾದ ಪ್ರತಿಗಳನ್ನು ಎರಡು ದಿವಸ ಅಥವಾ ಒಂದು ದಿವಸ ಮುಂಚಿತವಾಗಿಯಾದರೂ ನಮ್ಮ ನಮ್ಮ ಕೈಯೊಳಗೆ ಬರುವ ಹಾಗೆ ಮಾಡದರೆ ಬಹಳ ಅನುಕೂಲವಾಗುತ್ತದೆ. ಹಾಗಿಲ್ಲದೆ ಈಗ ಬರುವಂತೆ abrupt ಆಗಿ ಬರುವಂತಾದರೆ ನಾವು ಪ್ರಶ್ನೆ ಹಾಕುವುದು ಸರಿಯಾಗಿಲ್ಲ ಎಂದು ತಾವೇ ಹೇಳುತ್ತೀರಿ. "You put a separate question" ಎಂದು ಹೇಳುತ್ತೀರಿ. ಈಗ ಮಾನ್ಯ ಮಂತ್ರಿಗಳು ಹೇಳಿದುದಕ್ಕೆ ನಾವು ಪೂರ್ಣ ಬೆಂಬಲ ಕೊಡುತ್ತೇವೆ. ತಾವು ಇದಕ್ಕೆ ಅವಕಾಶ ಕೊಡಬೇಕಾದುದು ಅವಶ್ಯಕ.

Sri T. SUBRAMANYA.—I want to make one submission about prorogation.

Mr. SPEAKER.—I am afraid some aspersion is sought to be cast against the Legislature Office. So I want to make the position clear. Today also I am getting answers just now. I have to send them to the printing press after scrutiny. That is why I suggest that if we prorogue the House

at the end of the session, members can go on sending questions and I can send them on to the Government so that the replies may be received in time. The trouble is not with the Legislature Office. I must express that the Office is working very hard to the best of its capacity. It is a fact that some replies from the Government are received just now and I am sending them to the Press.

Sri H. M. CHANNABASAPPA.—We should also have reasonable time to collect the information and send the replies well in time.

Mr. SPEAKER.—In many cases Government have not sent the replies within 15 days nor have they asked for extension of time. I did not want to comment on all this, but unconsciously an attempt is being made to impress that there is something wrong with the Legislature Office with which I am concerned and so I have to make clear the position. I do not want to blame anybody. I only expressed that since the Assembly was prorogued at a much later date, it has given rise to all this trouble.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಇಷ್ಟು ಹೇಳಿರುವುದರಿಂದ ಈ ವಿಷಯದಲ್ಲಿ ಗಮನವಿಟ್ಟು ಸ್ವಲ್ಪ ಕಾಲಾವಕಾಶವನ್ನು ಕೊಟ್ಟರೆ ಒಳ್ಳೆಯದು ಎಂದು ಹೇಳಿದರು. ಇಷ್ಟು ಚ್ಯೆಂನ್ನು ಕೊಟ್ಟರೂ ಬೆಂಗಳೂರು ಡಿವಿಜನ್ನಿಗೇ ಸೇರಿದ ಚನ್ನಪಟ್ಟಣದ ಬಗ್ಗೆ ಕೇಳಿದ ಪ್ರಶ್ನೆಗೇ ಇನ್ನೂ ಉತ್ತರ ತರಿಸಿಕೊಡುವುದಕ್ಕೆ ಆಗಲಿಲ್ಲ.

Sri GAJANAN PANDIT.—What is the practice prevailing in the Lok Sabha?

Mr. SPEAKER.—That is quite different. If we adopt the Lok Sabha practice, the difficulties might increase.

†ಶ್ರೀ ಕೆ. ಪುಟ್ಟಸ್ವಾಮಿ.—ಅವರು ಹೇಳಿದ ಪ್ರಕಾರ ಆಲೋಚನೆಮಾಡಿ ನೋಡಿದರೆ ಸರಕಾರದವರು ಸಕಾಲದಲ್ಲಿ ಉತ್ತರವನ್ನು ಒದಗಿಸದೇ ಹೋದರೆ ಸರಕಾರದ ಮೇಲೆ ಒತ್ತಾಯಹಾಕಿ ಉತ್ತರಗಳನ್ನು ತರಿಸಿಕೊಳ್ಳತಕ್ಕ ಅಧಿಕಾರ ಇರಬೇಕೆಂದು ಮಾನ್ಯ ಸದಸ್ಯರ ಅಭಿಪ್ರಾಯವೇನು? ಲೋಕ ಸಭೆಯ ಪದ್ಧತಿ ಏನು ಎಂದರೆ, ಲೋಕ ಸಭೆಯಲ್ಲಿ ನೋಟೀಸು ಕೊಟ್ಟ ಹದಿನೈದು ದಿನದೊಳಗಾಗಿ ಅಸೇತು ಹಿಮಾಚಲ ಪರ್ಯಂತ ವಿಶಾಲವಾದ ದೇಶದಿಂದ ಸಮಾಚಾರ ತರಿಸಿ ಕೊಡುತ್ತಾರೆ.

6 P.M.

ಈ ಸಣ್ಣ ಮೈಸೂರು ದೇಶದಲ್ಲಿ ಸಮಾಚಾರ ತರಿಸಿಕೊಡುವುದಕ್ಕಾಗುವುದಿಲ್ಲ, ತೊಂದರೆಗಳಿವೆ ಎಂದರೆ, ಸರ್ಕಾರದವರು ಏನೇನು ತೊಂದರೆಗಳಿವೆ ಎಂಬುದನ್ನು ಈ ಸಭೆಯ ಮುಂದೆ ಇಡಬೇಕಾಗಿತ್ತು ಎಂದು ನಾನು ಹೇಳುತ್ತೇನೆ. ಅಧ್ಯಕ್ಷರು ತೊಂದರೆ ಇದೆ ಎಂದು ಪದೇ ಪದೇ ಒತ್ತಿ ಒತ್ತಿ ಹೇಳುತ್ತಿರುವುದನ್ನು ನೋಡಿದರೆ ಹಿಂದಿನ ವಿಚಾರ ಜ್ಞಾಪಕಕ್ಕೆ ಬರುತ್ತದೆ. ತಾವು ಇಲ್ಲಿಗೆ ಬಂದು ಅಧ್ಯಕ್ಷರಾದ ಹೊಸದರಲ್ಲಿ ಕೆಲವು rules adopt ಮಾಡಬೇಕೆಂದು ಹೇಳಿದಿರಿ. ಎಷ್ಟೇ ಪ್ರಶ್ನೆಗಳನ್ನಾದರೂ, ಯಾವತ್ತಾದರೂ ಕಳಿಸಬಹುದೆಂದು ಮಾಡಿದಿರಿ. ಬೇಕಾದಷ್ಟು ಪ್ರಶ್ನೆಗಳ ಸುರಿಮಳೆಯಾಯಿತು. ಆದರೆ ಉತ್ತರಗಳು ಮಾತ್ರ ಬರಲಿಲ್ಲ. ಹೀಗಾದುದರಿಂದ ಈಗ ಬೇರೆ ಪದ್ಧತಿಗೆ ಬಂದಿದ್ದೇವೆ. ಸರ್ಕಾರದವರು ತಮಗೆ ಕೊಟ್ಟಿರುವ ಹದಿನೈದು ದಿವಸಗಳ ಅವಧಿಯಲ್ಲಿ ಉತ್ತರಗಳನ್ನು ಒದಗಿಸಲೇಬೇಕು. ಹಾಗೆ ಒದಗಿಸುವುದಕ್ಕೆ ಸಾಧ್ಯವಿಲ್ಲದೆ ಇದ್ದರೆ, ಯಾವ ಕಾರಣದಿಂದ ಹಾಗೆ ಮಾಡುವುದಕ್ಕಾಗುವುಲ್ಲವೆಂದು ಕಾಲಾವಕಾಶ ಪಡೆಯಬೇಕು. ಸರ್ಕಾರದವರಿಗೆ ಈಗಿರತಕ್ಕ ನಮ್ಮ ನಿಯಮಾವಳಿಯ ಪ್ರಕಾರ ಹದಿನೈದು ದಿನಗಳ ಅವಧಿ ಸಾಕು, ಅಷ್ಟರೊಳಗೆ ಸರ್ಕಾರದವರು ಉತ್ತರ ಒದಗಿಸುವುದಕ್ಕೆ ಪ್ರಯತ್ನಮಾಡಬೇಕು. ತಾವು ಹೇಳಿದುದಕ್ಕೆ ನಾವು ಒಪ್ಪಿಗೆಯನ್ನು ನೀಡಿ, ಹೊಸ ಹೊಸ ಪ್ರಶ್ನೆಗಳನ್ನು ಕಳಿಸುವುದಕ್ಕೆ ಷುರು ಮಾಡಿ, ಶ್ರೀರಂಗಪಟ್ಟಣದಿಂದ ಬೆಂಗಳೂರಿಗೆ ಎಷ್ಟು ಮೈಲಿ ದೂರವಾಗುತ್ತದೆ ಎಂಬಿತ್ಯಾದಿ ಪ್ರಶ್ನೆಗಳನ್ನು ಕೇಳಿದರೆ ಸರ್ಕಾರದವರು ಅಳತೆಮಾಡಿಸುವುದಕ್ಕೆ ಜನರನ್ನು ಕಳಿಸಬೇಕಾಗಬಹುದು. ಅಧಿವೇಶನ ಹತ್ತಿರ ಬಂದಾಗ ಅನೇಕ ಮುಖ್ಯ ವಿಷಯಗಳು ಜರುಗುತ್ತವೆ. ಅವುಗಳ ಸಂಬಂಧದಲ್ಲಿ ಪ್ರಶ್ನೆಗಳನ್ನು ಕಳಿಸಿ ನಾವು ಜವಾಬನ್ನು ಪಡೆಯಬೇಕಾಗುತ್ತದೆ. ಮಾಮೂಲಾದ ಪ್ರಶ್ನೆಗಳ ಮೇಲೆ ಸಹ ಉತ್ತರ ಬರುತ್ತಿಲ್ಲ.

ಅಧ್ಯಕ್ಷರು.—ನಾನು practical experience ಹೇಳಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ಇಂಥ ಕಷ್ಟವನ್ನು ನಾನು ಯಾವಾಗಲೂ ನೋಡಿರಲಿಲ್ಲ.

ಅಧ್ಯಕ್ಷರು.—ಹೊಸ ರಾಜ್ಯವಾದ ಮೇಲೆ ಈ ತೊಂದರೆಗಳು ಬಂದಿವೆಯೆಂದು ತಾವು ಹೇಳುತ್ತೀರಾ? ಇದಕ್ಕೆ ಯಾರು ಜವಾಬ್ದಾರರು?

ಶ್ರೀ ಕೆ. ಪುಟ್ಟಸ್ವಾಮಿ.—ಹೌದು. ಸಭೆ ಪ್ರಾರಂಭವಾಗುವುದಕ್ಕೆ ಮೊದಲು ಹದಿನೈದು ದಿನಗಳವರೆಗೂ ಪ್ರಶ್ನೆಗಳನ್ನು ಕಳಿಸುತ್ತಿದ್ದೆವು. ಸಮಂಜಸವಾದ ಉತ್ತರ ಎಲ್ಲ ಪ್ರಶ್ನೆಗಳಿಗೂ ಬರುತ್ತಿತ್ತು. ಆ ಮೇಲೆ ಪ್ರತಿ ಅಧಿವೇಶನದಲ್ಲಿಯೂ ಯಾವ ಯಾವ ಪ್ರಶ್ನೆಗಳು ಬರುತ್ತವೆಂದು ಒಂದು ಪುಸ್ತಕ ಕೊಡುತ್ತಿದ್ದರು.

ಅಧ್ಯಕ್ಷರು.—ಈಗ ಏಕೆ ಬರುವುದಿಲ್ಲವೆಂಬುದನ್ನು ಹೇಳುತ್ತೀರಾ?

ಶ್ರೀ ಕೆ. ಪುಟ್ಟಸ್ವಾಮಿ.—ಏಕೆ ಬರುವುದಿಲ್ಲವೆಂಬ ವಿಷಯದ ಮೇಲೆ ತಮ್ಮ ಹತ್ತಿರ dispute ಮಾಡುವುದಿಲ್ಲ. ಈಗ ಅವು ಬರುತ್ತಿಲ್ಲವೆಂದು ಹೇಳುತ್ತೇನೆ.

Mr. SPEAKER.—Does the Hon'ble Member mean to say that I am at fault?

ಶ್ರೀ ಕೆ. ಪುಟ್ಟಸ್ವಾಮಿ.—ತಾವು ಹೇಳಿದುದನ್ನು ನಾನು ಒಪ್ಪಿಕೊಳ್ಳುತ್ತೇನೆ. I am not disputing your statement. 15 ದಿವಸಗಳೊಳಗೆ ಸರ್ಕಾರದಿಂದ ಉತ್ತರಗಳು ಬರಬೇಕು, ಈಗಿನಂತೆ ಆಗಬಾರದು ಎಂದು ಹೇಳುತ್ತೇನೆ.

ಶ್ರೀ ಜಿ. ಎಸ್. ಪುಟ್ಟಣ್ಣ (ತುಮಕೂರು).—ನವೆಂಬರ್ ತಿಂಗಳ ಮೊದಲನೆಯ ವಾರದಲ್ಲಿ ರೂಲ್ಸ್ ಪ್ರಕಾರ ನಾನು ಹತ್ತು ಪ್ರಶ್ನೆಗಳನ್ನು ಕಳಿಸಿದೆ. ತಾವು ಹೆಡ್‌ಕ್ವಾರ್ಟರ್ಸ್‌ನಲ್ಲಿರಲಿಲ್ಲ. ತಮ್ಮ ಆಫೀಸಿನವರು ಅಡ್ವಾನ್ಸ್ ಕಾಪಿಗಳನ್ನ ನಂಬಿಂಧಪಟ್ಟ ಪ್ರತಿಯೊಂದು ಇಲಾಖೆಗೂ ಕಳಿಸಿಕೊಟ್ಟರು. ಒಂದು ತಿಂಗಳ ಮೇಲೆ ಆಗಿದ್ದರೂ ಕೂಡ ನನ್ನ ಪ್ರಶ್ನೆಗಳಿಗೆ ಉತ್ತರಗಳು ಬಂದಿಲ್ಲ. ಏತಕ್ಕೆ ಬಂದಿಲ್ಲವೆಂದರೆ ನಾನು ಕಳಿಸಿರುವ ಕೆಲವು ಪ್ರಶ್ನೆಗಳು ಕೆಲವರಿಗೆ ಬಹಳ ಅಪಾಯ ಸ್ಥಿತಿಯಲ್ಲಿವೆ.

Sri G. SIVAPPA.—That is not the point.

Sri G. N. PUTTANNA.—It may not be a point from his point of view. It is a point from my point of viw. This little gentleman always comes in our way (*Laughter*).

ನನ್ನ ಪ್ರಶ್ನೆಗಳಿಗೆ ಉತ್ತರಗಳು ಬಾರದೆ ಇರುವುದಕ್ಕೆ ನಾನಾ ಕಾರಣಗಳಿವೆ. ವಿಧಾನ ಮಂಡಲದ ಕಚೇರಿಯಲ್ಲಿ ಹಗಲೂ, ರಾತ್ರಿ ಕೆಲಸ ಮಾಡಿ ಪ್ರಶ್ನೆಗಳ ನಕಲುಗಳನ್ನ ಕಳಿಸಿದರೂ ಕೂಡ ಉತ್ತರಗಳನ್ನು ಕೊಡುವುದಿಲ್ಲ. ಈ ರೀತಿಯಾಗುತ್ತಿರುವುದನ್ನು ತಪ್ಪಿಸದೆ ಹೋದರೆ ಬಹಳ ಕಷ್ಟವಾಗುತ್ತದೆ.

Sri T. SUBRAMANYA (Minister for Law, Labour and Local Self-Government).—Sir, I want to make the position of Government very clear. We have been trying our best to send answers in time. Out of 200 and odd questions that are pending for answer, I do not know how many are beyond 15 days and how many within 15 days. Whatever it may be, I take the responsibility of saying that we must be able to give the anwers to the House within fifteen days from the date of receiving the question. We are doing our best. I will get it examined as to which departments have failed. So far as my department is concerned, we have answered more than 80 per cent. It is not our intention that we should not send the answers within fifteen days. But, some times it becomes impossible. All the same, we must write to the Speaker according to rules, requesting extension of time. We will see that answers to as many questions as possible are sent.

Mr. SPEAKER.—For the information of the Hon'ble Minister, I can say that on 22-12-59, 66 questions were to be received and no extension of time has been asked for. And, to day it must be 80.

Sri T. SUBRAMANYA.—It may be, os ; I do not deny. it But, there is no intention of delaying matters.

Sri SRINIVAS SHETTY.—Not delaying ; you have not even asked for extension of time !

Sri T. SUBRAMANYA.—When I am admitting it, you are going to argue the case. Some times, people are in the habit of arguing the case even after the judgment is given. (*Laughter*) Apart from that, 66 answers had to be sent and no request for extension of time has been received by the Speaker. That is admitted. That is why I said that I would will find out which department had done it. We will rectify and pull up the department. We will see that hereafter you will not have an opportunity to complain like this.

Secondly, Sri G. N. Puttanna said that it was harmful for some to give answers. No question is harmful to us. We will answer every question, however irksome it may be.

Sri G. N. PUTTANNA.—Inconvenient.

Sri T. SUBRAMANYA.—If it is inconvenient also, we will answer it. So far as the prorogation of the House is concerned, we will have to consider it in detail because several Bills that are pending will have to be reintroduced and we will have to seek once again the consent of the Governor in several matters.

Any way, we will consider it. I do not say either Aye or Nay about it.

Mr. SPEAKER.—I hope the prorogation will come in time. The House rises and will meet tomorrow at 8-30 A M.

The House adjourned at Twenty Minutes past Six of the Clock to meet again at Thirty Minutes past Eight of the Clock on Thursday, the 24th December 1959.

WD 2030—GPP—900—29-6-1961